ಬೆಂಗಳೂರಿನಲ್ಲಿ ಭವಿಷ್ಯನಿಧಿ ಅದಾಲತ್

ಬೆಂಗಳೂರು, ಅಕ್ಟೋಬರ್ 03, 2005

ಭವಿಷ್ಯನಿಧಿ ಅದಾಲತನ್ನು ಅಕ್ಟೋಬರ್ 13, 2005ರಂದು ನಗರದ ರಾಜಾರಾಂ ಮೋಹನ್ ರಾಯ್ ರಸ್ತೆಯಲ್ಲಿರುವ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಕಛೇರಿಯಲ್ಲಿ ಆಯೋಜಿಸಲಾಗುವುದು. ಭವಿಷ್ಯನಿಧಿ ಚಂದಾದಾರರು ಹಾಗು ಸದಸ್ಯರು ತಮ್ಮ ಕುಂದುಕೊರತೆಗಳನ್ನು ಈ ಅದಾಲತ್‌ನಲ್ಲಿ ಸಲ್ಲಿಸಬಹುದು. ಹೆಸರು, ವಿಳಾಸ ಸರಿಯಾದ ಪಿಎಫ್ ಕೋಡ್ ನಂಬರ್ ಹಾಗು ಅಕೌಂಟ್ ನಂಬರ್ ಮತ್ತು ಕೆಲಸ ಮಾಡುತ್ತಿರುವ ಸಂಸ್ಥೆಯ ವಿವರಗಳನ್ನು ಅಕ್ಟೋಬರ್ 5, 2005ರ ಮುನ್ನ ಕಛೇರಿಗೆ ಕಳುಹಿಸುವಂತೆ ತಿಳಿಸಲಾಗಿದೆ. ದೂರು ಪತ್ರಗಳನ್ನು ಕಛೇರಿಯ ದೂರು ಪೆಟ್ಟಿಗೆಯಲ್ಲಿ ಹಾಕಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ಕಛೇರಿಯ ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು ದೂರವಾಣಿ ಸಂಖ್ಯೆ 22483722, 22279130 ಅಥವಾ 22230062 ರಲ್ಲಿ ಸಂಪರ್ಕಿಸಬಹುದು.